ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣ ಹಾಗೂ ನನ್ನ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು:– ಹೌದು, ಅದಕ್ಕೆ ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೇ, ಅದು ತುಂಬಾ ಸರಳವಾದ ಪ್ರಶ್ನೆ, ಅದಕ್ಕೆ ಸರಳ ಉತ್ತರ ಅಷ್ಟೇ ಸಾಕಾಗಿರುವುದು. ಅದಕ್ಕೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳುವಂತಹ ಅಗತ್ಯವಿಲ್ಲ.

ಅಧ್ಯಕ್ಷರು:– ಸುರೇಶ್ ಕುಮಾರ್‌ರವರೇ, ಇದಕ್ಕೆ ಉತ್ತರವನ್ನು ಯಾವಾಗ ಕೊಡುತ್ತೀರಿ?

ಶ್ರೀ ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಅದಕ್ಕೆ Finance Department ನಿಂದ ಮಾಹಿತಿ ಬರಬೇಕು. ಮಾಹಿತಿ ಬಂದತಕ್ಷಣ ಕೊಡುತ್ತೇನೆ.

ಅಧ್ಯಕ್ಷರು: ಈ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡಿ.

237 ಶ್ರೀ ಶಿವಶಂಕರ ರೆಡ್ಡಿ. ಎನ್.ಹೆಚ್
ಮಾನ್ಯ ಮುಖ್ಯಮಂತ್ರಿಗಳು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು (ವಿವರ ಒದಗಿಸುವುದು);

ಗೌರಿಬಿದನೂರು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ;

ರಾಜ್ಯ ಅರಣ್ಯ – 8,628.52 ಎಕರೆ
ಮೈನರ್ ಫಾರೆಸ್ಟ್ – 430.26 ಎಕರೆ
ಒಟ್ಟು – **9,059.38** ಎಕರೆ

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ: ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸುವ ದಂಡವೇನು:

ಒಟ್ಟು 104 ಜನ ರೈತರು 212ಎಕರೆ 30 ಗುಂಟೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ದಿನಾಂಕ: 27/04/1978ರ ಪೂರ್ವದ ಒತ್ತುವರಿಯನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ದಿನಾಂಕ: 15/05/1996 ಹಾಗೂ ರಾಜ್ಯ ಸರ್ಕಾರದ ದಿನಾಂಕ: 5/05/1997ರ ಆದೇಶಗಳಲ್ಲಿ ಒಟ್ಟು 14848.726 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19348 ಕುಟುಂಬಗಳಿಗೆ ಸಕ್ರಮ ಮಾಡಲು, ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿದೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಈ ಮೇಲೆ ಹೇಳಿದ ಎಲ್ಲಾ ಅರಣ್ಯ ಅತಿಕ್ರಮಣಗಳೂ ದಿನಾಂಕ: 27/04/1978ರ ನಂತರದ ಅತಿಕ್ರಮಣ ಪ್ರಕರಣಗಳಾಗಿರುತ್ತವೆ. ಆದುದರಿಂದ ಈ ಅತಿಕ್ರಮಣಗಳನ್ನು ಈ ಮೇಲೆ ತಿಳಿಸಿದ ಆದೇಶಗಳ ಅಡಿಯಲ್ಲಿ ಪರಿಗಣಿಸಲು ಅರ್ಹವಾಗಿರುವುದಿಲ್ಲ.

ಅರಣ್ಯ ಜಮೀನನ್ನು, ಯಾರೇ ಆಗಲೀ ಅನುಮತಿ ಇಲ್ಲದೇ ಅರಣ್ಯೇತರ ಉದ್ದೇಶಕ್ಕೆ ಬಳಸಿದ್ದಲ್ಲಿ, 1963ರ 24ನೇ ನಿಯಮದ ಪ್ರಕಾರ ಹಾಗೂ 1980ರ ಅರಣ್ಯ ಸಂರಕ್ಷಣೆ ಕಾಯ್ದೆಯ 3(ಎ) ವಿಧಿಯ ಪ್ರಕಾರವೂ ದಂಡನೆಯನ್ನು ವಿಧಿಸಬಹುದಾಗಿದೆ.

1963ರ ಕರ್ನಾಟಕ ಅರಣ್ಯ ಕಾಯ್ದೆಯ ಅಧಿನಿಯಮ 64(ಎ) ಪ್ರಕಾರ ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೂ ಕಡಿಮೆ ಇಲ್ಲದ ಅಧಿಕಾರಿಯಿಂದ ವಿಚಾರಣೆಗೆ ಒಳಪಡಿಸಿ ಕ್ರಮ ಕೈಗೊಳ್ಳಬೇಕೆಂದಿದೆ.

ಅತಿಕ್ರಮಣಕಾರರನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಬಡ ಕುಟುಂಬಗಳು ಜೀವನೋಪಾಯವನ್ನು ನಡೆಸುತ್ತಿರುವ ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಇದು ಅಕ್ರಮ ಸಾಗುವಳಿಯಾಗಿರುವುದರಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಭಾದ್ಯತೆ ಅಥವಾ ಜವಾಬ್ದಾರಿ ಸರ್ಕಾರಕ್ಕೆ ಇರುವುದಿಲ್ಲ.

ಶ್ರೀ ಎನ್. ಸಂಪಂಗಿ(ಶಿವಶಂಕರ ರೆಡ್ಡಿ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 1997ರವರೆಗೂ 14,848 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19,348 ಕುಟುಂಬಗಳಿಗೆ ಸಕ್ರಮ ಮಾಡಲು ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ 1978ರ ನಂತರದ ಅತಿಕ್ರಮಣ ಪ್ರದೇಶಗಳ ಪ್ರಕರಣಗಳೇನಿರುತ್ತವೆ, ಅದರ ಬಗ್ಗೆ ಏನು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ? ಆ ಪ್ರದೇಶಗಳಲ್ಲಿ ಇರುವಂತಹ ಬಡವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂದು ಕೇಳುತ್ತೇನೆ.

ಡಾ: ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಒಟ್ಟು 104 ಜನ ರೈತರು 212 ಎಕರೆ 30 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಇದರಲ್ಲಿ ಬಹಳಷ್ಟು ಜನ ಜಮೀನು ಇಲ್ಲದಂತಹ ರೈತರು ಇದ್ದಾರೆ. Labourers

ಇದ್ದವರು ಜಮೀನು ಒತ್ತುವರಿ ಮಾಡಿದ್ದಾರೆ. ಆದರೆ ದಿ:27.04.1978ರ ಪೂರ್ವದ ಒತ್ತುವರಿ ಏನಿದೆ, ಅದನ್ನು ಮಾತ್ರ ನಮಗೆ ಸಕ್ರಮ ಮಾಡುವುದಕ್ಕೆ ಅವಕಾಶ ಇದೆ. ಅದನ್ನು recommend ಮಾಡಿ ಕಳುಹಿಸಿಕೊಟ್ಟಿದ್ದೇವೆ. ಹಿಂದೆ unauthorized cultivation ಮಾಡಿದ್ದರೂ ಕೂಡ ಅದಕ್ಕೆ ಪರ್ಯಾಯವಾಗಿ revenue land ಕೊಟ್ಟು ಆ ಬಡವರನ್ನು ಉಳಿಸಿಕೊಳ್ಳಬಹುದಾ ಎನ್ನುವುದಕ್ಕೆ ನಾವು ಅನುಮತಿಯನ್ನು ತೆಗೆದುಕೊಳ್ಳಬೇಕು. ಒಂದು ಗಂಟೆ ಹೊಸದಾಗಿ ಅರಣ್ಯ ಒತ್ತುವರಿ ಮಾಡಿದವರಿಗೆ ರಕ್ಷಣೆ ಕೊಡುವಂತಹ ಪ್ರಶ್ನೆ ಇಲ್ಲ. ಕಾನೂನು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುತ್ತದೆ. ಈಗಿರುವ Supreme Court decision ಪ್ರಕಾರ ದಿನಾಂಕ 27.04.78ರ ಹಿಂದೆ ಇದ್ದವರಿಗೆ ಮಾತ್ರ confirm ಮಾಡಬಹುದು ಹೊರತು ಯಾವುದೇ ಕಾರಣಕ್ಕೂ ಕೂಡ ಆ ದಿನಾಂಕದ ನಂತರ ಒತ್ತುವರಿ ಮಾಡಿಕೊಂಡವರಿಗೆ ಸಕ್ರಮ ಮಾಡುವುದಕ್ಕೆ ಬರುತ್ತಿಲ್ಲ. ಆದರೆ ಮಾನವೀಯತೆ ದೃಷ್ಟಿಯಿಂದ ಅವರು ಕಡುಬಡವರು, ಜಮೀನು ಇಲ್ಲದಿರುವವರು ಇರುವುದರಿಂದ ಅವರಿಗೆ ಬಿಗಿಯಾದ ಕ್ರಮವನ್ನು ಈ ಕೇಸ್‌ನಲ್ಲಿ ತೆಗೆದುಕೊಂಡಿಲ್ಲ. ಆದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೆ alternate revenue land ಕೊಡುವುದಕ್ಕೆ ಆಗುತ್ತದೆಯೇ ಎಂದು ಪರಿಶೀಲನೆ ಮಾಡಿ, ಅದಕ್ಕೆ ಕೇಂದ್ರ ಸರ್ಕಾರದ ಹಾಗೂ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದು ಮಾಡಬೇಕಾಗುತ್ತದೆ. ಸದ್ಯಕ್ಕೆ ಈ ಜಮೀನುಗಳನ್ನು ಅವರಿಗೆ ಖಾಯಂ ಮಾಡುವುದಕ್ಕೆ ಬರುವುದಿಲ್ಲ. ಅವರನ್ನು ಆ ಜಾಗದಿಂದ ಖಾಲಿ ಮಾಡಿಸುವುದೇ ಇರುವಂತಹ ಮಾರ್ಗ. ಆದರೆ ನಾವು ಮಾನವೀಯತೆಯ ದೃಷ್ಟಿಯಿಂದ ಸ್ವಲ್ಪ ನಿಧಾನ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ನೋಡಿ ಶರಣ ಪ್ರಕಾಶ್‌ರವರೇ, ಇದು ಗೌರಿಬಿದನೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಚಾರ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇದು ಅತಿಕ್ರಮಣಕ್ಕೆ ಸಂಬಂಧಪಟ್ಟಂತಹ ವಿಚಾರ.

ಅಧ್ಯಕ್ಷರು: ಸಂಪಂಗಿಯವರೇ, ಇದಕ್ಕೆ ಏನಾದರೂ ಉಪಪ್ರಶ್ನೆ ಕೇಳುವುದಿದ್ದರೆ ಕೇಳಿ. ಶರಣ ಪ್ರಕಾಶ್‌ರವರೇ ಅವರಿಗೆ ಮಾತನಾಡುವುದಕ್ಕೆ ಅಧಿಕಾರ ಕೊಟ್ಟಿದೆ. ಅವರು ಮಾತ್ರ ಕೇಳಲಿ. ಸಂಪಂಗಿಯವರೇ ನೀವು ಕೇಳುವುದಾದರೆ ಕೇಳಿ, ಇಲ್ಲದಿದ್ದರೆ ಬಿಡಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈ ಪ್ರಶ್ನೆ ಗೌರಿಬಿದನೂರು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವುದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ಇದು ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟಂತಹ ವಿಚಾರ ಇದೆ.

ಅಧ್ಯಕ್ಷರು:– ಇಲ್ಲ, ನೀವು ಅದನ್ನು ಬಜೆಟ್‌ಗೆ ಅವಕಾಶ ಕೊಟ್ಟಾಗ ಚರ್ಚೆ ಮಾಡಿ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಬಡವರಿಗೆ ಅನುಕೂಲವಾಗಲಿ ಎಂದು ಕೇಂದ್ರ ಸರ್ಕಾರ ಈಗ ಹೊಸದಾಗಿ....

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ Forest welfare protection actಎಂದು ಹೊಸ ಕಾನೂನು ಮಾಡಿದ್ದಾರೆ. ಆ ಕಾನೂನಿನ ಅಡಿಯಲ್ಲಿ ಏನಾದರೂ ಇದಕ್ಕೆ ಅವಕಾಶ ಇದೆಯೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ನೀವು ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲ.

ಡಾ: ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಈಗಿರುವಂತಹ ಹೊಸ ಕಾನೂನು ಅಡಿಯಲ್ಲಿರಬಹುದು, ಯಾವುದೇ ಕಾನೂನು ಅಡಿಯಲ್ಲಿರಬಹುದು, ಅರಣ್ಯ ಒತ್ತುವರಿಯನ್ನು ಸಕ್ರಮ ಮಾಡುವುದಕ್ಕೆ ಅವಕಾಶ ಇಲ್ಲ. ಇವತ್ತು ಬಹಳ ಸ್ಪಷ್ಟವಾಗಿ ಎರಡು ಪ್ರಮುಖವಾದ ವಿಷಯಗಳನ್ನು ನಾವು ತೀರ್ಮಾನ ಮಾಡಿರುವುದೇನೆಂದರೆ ಒತ್ತುವರಿ ಪ್ರಕರಣಗಳು ದಿ: 27.04.78ರ ಮೊದಲೇ ಆಗಿರಬೇಕು, ಒತ್ತುವರಿ ಪ್ರದೇಶ ಸಕ್ರಮ ಮಾಡುವುದಾದರೆ ಅವನ ಸ್ವಂತ ಹಿಡುವಳಿ ಸೇರಿ ಅದರ ವಿಸ್ತೀರ್ಣ ಮೂರು ಎಕರೆಗಿಂತ ಮೀರಿರಬಾರದು, ಒತ್ತುವರಿದಾರನ ವಾರ್ಷಿಕ ವರಮಾನ ಎಂಟು ಸಾವಿರ ರೂಪಾಯಿಗಿಂತ ಜಾಸ್ತಿ ಇರಬಾರದು, ಇದು ನಮ್ಮ ರಾಜ್ಯ ಸರ್ಕಾರದ ನಿಯಮಾವಳಿಗಳು. ಆದರೆ ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ಒತ್ತುವರಿ ಜಮೀನು ಅರಣ್ಯ ಪ್ರದೇಶದ ಮಧ್ಯ ಭಾಗದಲ್ಲಿ ಇರಬಾರದು, ಅತಿಕ್ರಮಣ ಅರಣ್ಯ ಧಾಮ ಅಥವಾ ರಾಷ್ಟ್ರೀಯ ಉದ್ಯಾನ ವನಗಳಲ್ಲಿ ಮಾಡಿರಬಾರದು, ಇಳಿಜಾರು ಪ್ರದೇಶದಲ್ಲಿ ಇರಬಾರದು. ಅದೂ ಕೂಡ 1978ರ ಮೊದಲು ಇರುವುದು. ಈಗಾಗಲೇ ಹೇಳಿದ ಹಾಗೆ ನಾವು ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ನಮ್ಮಲ್ಲಿ surplus revenue land ಏನಿದೆ, ಅದನ್ನು alternative ಆಗಿ ಕೊಡುವುದಕ್ಕೆ ಆಗುತ್ತದೆಯೇ ಎಂದು ಪರಿಶೀಲನೆ ಮಾಡಿ ಕೇಂದ್ರದ ಅನುಮತಿಯನ್ನು ಪಡೆದು ಮಾಡಬೇಕಾಗುತ್ತದೆ. ನಿಜವಾದ landless labourers ಎಸ್‌ಸಿ:ಎಸ್‌ಟಿ ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಇದರ ಬಗ್ಗೆ ನಾನು ಇಪ್ಪತ್ತು ವರ್ಷ ಹೋರಾಟ ಮಾಡಿಕೊಂಡು ಬಂದಿರುವುದು ತಮಗೆ ಗೊತ್ತಿದೆ. ಆದರೆ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆದರೆ ಈಗಿರುವಂತಹ ಕಾನೂನು ಚೌಕಟ್ಟಿನಲ್ಲಿ ಅವಕಾಶ ಇಲ್ಲ. ನಾವು ಕೇಂದ್ರ ಸರ್ಕಾರದ ಮನವೊಲಿಸಿ, alternative land ಕೊಡುತ್ತೇವೆ, ಕಡುಬಡವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿ ನಾವು

ಪ್ರಯತ್ನ ಮಾಡುತ್ತೇವೆ. ನಾನು ನಿಮ್ಮ ಜೊತೆಗೆ ಇದ್ದೇನೆ. ನನಗೆ ಅವರ ಬಗ್ಗೆ ಸಹಾನುಭೂತಿ ಇದೆ.

61 ಶ್ರೀ ಪಾಟೀಲ್ ಎ.ಎಸ್
ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು)

ಅ) ಬಿಜಾಪುರ ಜಿಲ್ಲೆ ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ ರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತವೆ(ರಸ್ತೆಗಳ ವಿವರ ಕಿ.ಮೀ ವಾರು ನೀಡುವುದು)

119.60 ಕಿ.ಮೀ ಉದ್ದದ 4 ರಾಜ್ಯ ಹೆದ್ದಾರಿಗಳು

337.21 ಕಿ.ಮೀ ಉದ್ದದ 28 ಜಿಲ್ಲಾ ಮುಖ್ಯ ರಸ್ತೆಗಳು

ರಸ್ತೆವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಈ ರಸ್ತೆಗಳ ಸುಧಾರಣೆಗೆ ವಿವಿಧ ಯೋಜನೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು?

ಕ್ಷೇತ್ರಗಳ ಮರುವಿಂಗಡಣೆಯಿಂದ ದೇವರ ಹಿಪ್ಪರಗಿ ಮತಕ್ಷೇತ್ರವು ಅಸ್ತಿತ್ವಕ್ಕೆ ಬಂದಿದ್ದು, 2008–09ನೇ ಸಾಲಿನ ಕಾಮಗಾರಿ ಹಾಗೂ ಅನುದಾನದ ವಿವರಗಳು ಮತ್ತು ಕಾಮಗಾರಿಯ ಹಂತವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಕಾಮಗಾರಿಗಳು ಯಾವ ಹಂತದಲ್ಲಿವೆ (ವಿವರ ನೀಡುವುದು);

ಈ) ಈ ರಸ್ತೆಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರಸ್ತಾಪಿತ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಲ-೨೦೨೨-೨೨